"ನಮ್ಮಜ್ಜಿ ಇದಾಳಲ್ಲಾ..."

"ಇದಾರೆ..."

"ಅವಳಿಗೂ ನನ್ನ ಕಂಡ್ರೆ ಆಗಲ್ಲ ಅಂದ್ಕಂಡಿದ್ದೆ. ನನ್ನ ಮದುವೆ ಗೊತ್ತಾದ್ಮೇಲೆ ಅವತ್ತೊಂದು ದಿನ ಅವಳು ಏನು ಹೇಳಿದ್ಲು ಗೊತ್ತಾ?"

"....."

"ಇನ್ನಾದ್ರೂ ಸುಖವಾಗಿರು ಮಗಳೇ. ಈ ಅಜ್ಜಿ ಕೂಡಾ ಎಲ್ಲರ ಹಾಗೇ ಅಂತ ನೀನು ಅಂದ್ಕೊಂಡಿರಬಹುದು. ಆದ್ರೆ ಅದು ಹಾಗಲ್ಲ ಕಣೇ ಅಂದ್ರು..."

"....."

"ಅಜ್ಜಿ ಬೇಕ್‌ಬೇಕೂಂತ ನನ್ನ ಕಂಡ್ರೆ ಆಗ್ದಿದ್ದ ಹಾಗೆ ನಟನೆ ಮಾಡ್ತಿದ್ದಿದ್ದಂತೆ. ಅವಳು ನನ್ನ ವಹಿಸಿಕೊಂಡ್ರೆ ಉಳಿದೋರು ನನಗೆ ಕೊಡೋ ಕಾಟ ಜಾಸ್ತಿಯಾಗುತ್ತೆ ಅಂತ ಅವಳಿಗೆ ಅನ್ನಿಸ್ತಿತ್ತಂತೆ. ಅದಕ್ಕೇ ಎಲ್ರಿಗಿಂತಾ ಜಾಸ್ತಿ ಅವಳೇ ಬೈದು..."

"ಅವರು ಹೇಳಿದ್ರು, ನೀನು ನಂಬಿಬಿಟ್ಟೆ ಅಲ್ವಾ?"

"ಪ್ರೀತಿ ಅನ್ನೋದನ್ನ ಬಾಯ್ಬಿಟ್ಟೇ ಹೇಳ್ಬೇಕಾದ್ದೇನಿಲ್ಲ. ಅರೆನಿದ್ದೆಯಲ್ಲಿ ಹೊದಿಕೆ ಸರಿ ಮಾಡ್ತಿದ್ದ ಕೈ ನನ್ನ ಮನಸ್ಸಲ್ಲಿ ಗಟ್ಟಿಯಾಗಿ ಕೂತ್ಬಿಟ್ಟಿದೆ. ಅಜ್ಜಿ ನಿಜ ಹೇಳ್ತಿದಾಳೆ ಅಂತ ಆ ಗಳಿಗೇಲಿ ನಂಗೆ ಅನ್ನಿಸ್ಬಿಡ್ತು..."

"ಮತ್ತೆ? 'ನನ್ನ ಕಂಡ್ರೆ ಯಾರಿಗೂ ಇಷ್ಟ ಇಲ್ಲ' ಅಂತ ತೀರ್ಮಾನ ಮಾಡ್ಬಿಟ್ಟಿದ್ಯಲ್ಲ?"

"ಕೊನೇವರೆಗೂ ಅಜ್ಜಿ ತಮ್ಮ ಗುಟ್ಟು ಬಿಟ್ಟುಕೊಟ್ಟಿರ್ಲಿಲ್ಲ ಅಂತ ಹೇಳ್ಲಿಲ್ವಾ? ಅವಳ ಪರಿಸ್ಥಿತಿ ಹಾಗಿತ್ತು."

"ಯಾಕೆ ಈ ಮಾತು ಅಂತ ಗೊತ್ತಾಗ್ತಿದೆ ನಂಗೆ..." ಅಂದ ಅನಂತ.

"ಯಾಕೆ?" ಅಮಾಯಕಳಂತೆ ಕೇಳಿದಳು ನಳಿನಿ.

"ನಿನ್ನ ಬಾಣಂತನಕ್ಕೆ ಅಜ್ಜಿ ಇಲ್ಲಿಗೆ ಬರ್ಬೇಕು, ಹೌದು ತಾನೇ?"

"ಕರೆದ್ರೆ ಬಂದೇ ಬರ್ತಾಳೆ ಅಜ್ಜಿ..."

"ಕರ್ಕೊಂಡ್ಬರೋಣ. ಬೇಕಾದ್ರೆ ಇಲ್ಲೇ ಇಟ್ಕೊಂಡು..." ಅವನ ಮಾತು ಪೂರೈಸಲು ಬಿಡದೆ ನಳಿನಿ ಅವನನ್ನು ಬಿಗಿದಪ್ಪಿದಳು.

"ನಿಧಾನ ಕಣೇ... ನಿಧಾನ..." ಅಂದ ಅನಂತ.


## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.